ಅಧ್ಯಕ್ಷರು.—ಈಗ ೫ ಪ್ರಶ್ನೆಗಳನ್ನು ಹಾಕಿರುವಾಗ ಒಬ್ಬರು ಮಾನ್ಯ ಸದಸ್ಯರು ಮಾತ್ರ ಬಂದಿದ್ದಾರೆ. ಇನ್ನು ನಾಲ್ಕು ಜನ ಬಂದೇ ಇಲ್ಲ. ಒಂದು ಪ್ರಶ್ನೆಗೆ ಸರ್ಕಾರ ಉತ್ತರವನ್ನು ಸಂಗ್ರಹಿಸಲು ಸರ್ಕಾರಕ್ಕೆ ಎಷ್ಟು ಖರ್ಚಾಗುತ್ತದೆ ಎಷ್ಟು ಶ್ರಮವಾಗುತ್ತದೆ, ಎಷ್ಟು ಕಾಲ ಹಿಡಿಯುತ್ತದೆ ಎಂಬುದನ್ನು ಮಾನ್ಯ ಸದಸ್ಯರು ತಿಳಿಯಬೇಕು. ಪ್ರಶ್ನೆಗಳನ್ನು ಕಳುಹಿಸಿ ಅವುಗಳಿಗೆ ಉತ್ತರವನ್ನು ಸಂಗ್ರಹಿಸಿ ಅವು ಸಭೆಯ ಮುಂದೆ ಬಂದಾಗ ಮಾನ್ಯ ಸದಸ್ಯರು ಸಭೆಗೆ ಹಾಜರಿಲ್ಲದಿದ್ದರೆ ಹೇಗೆ ? ಇಷ್ಟು ಲಘುವಾಗಿ ಇದನ್ನು ಪರಿಗಣಿಸಿದರೆ ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.—ಈ ಪ್ರಶ್ನೆಗಳನ್ನು ಕಳುಹಿಸಿದ ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರ ಬೇಕಾದ್ದು ಅವರ ಕರ್ತವ್ಯ. ಇವರು ಅದನ್ನು ಲಘುವಾಗಿ ತೆಗೆದುಕೊಳ್ಳಬಾರದು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೊದಲಿನಂತೆ ಒಂದು ದಿವಸಕ್ಕೆ ೧೦-೧೫ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿ ಅವುಗಳನ್ನು ಸಭೆಯಮುಂದೆ ಇಟ್ಟರೆ ಕೆಲವು ಜನ ಮಾನ್ಯ ಸದಸ್ಯರು ಬಾರದೆ ಇದ್ದರೂ ಕೂಡ ಉಳಿದ ಪ್ರಶ್ನೆಗಳ ಮೇಲೆ ಪ್ರಶ್ನೋತ್ತರ ನಡೆಯುವುದಕ್ಕೆ ಸಹಾಯವಾಗುತ್ತದೆ. ಈ ರೀತಿ ೫ ಪ್ರಶ್ನೆಗಳನ್ನು ಸಭೆಯ ಮುಂದೆ ತಂದರೆ ಹೇಗೆ ? ಸಭೆಯಮುಂದೆ ಸಾಕಷ್ಟು ಸಂಖ್ಯೆಯಲ್ಲಿ ಪ್ರಶ್ನೆಗಳು ಬಾರದೆ ಇರುವುದಕ್ಕೆ ಯಾರು ಕಾರಣ ಕರ್ತರು ? ಲೆಜಿಸ್ಲೇಚರ್ ಸೆಕ್ರೆಟೇರಿಯಟ್ಟೋ ಅಥವಾ ಸರ್ಕಾರವೇ ?

ಅಧ್ಯಕ್ಷರು.—ಇದಕ್ಕೆ ಲೆಜಿಸ್ಲೇಚರ್ ಸೆಕ್ರೆಟ್ರೇಯಟ್ ಹೊಣೆಯಲ್ಲ. ಸರ್ಕಾರವೇ ಹೊಣೆ. ಪ್ರಶ್ನೆಗಳಿಗೆ ಸರ್ಕಾರ ಉತ್ತರವನ್ನು ಒದಗಿಸಿದ ಹಾಗೆ ಪ್ರಶ್ನೆಗಳು ಸಭೆಯಮುಂದೆ ಬರುತ್ತವೆ. ಈ ಬಗ್ಗೆ ನಿನ್ನೆ ದಿವಸ ಮಾನ್ಯ ಉಪಾಧ್ಯಕ್ಷರು ವಿವರಣೆಯನ್ನು ಕೊಟ್ಟಿದ್ದಾರೆ ನಾನು ಈಗಲೂ ಅದನ್ನೇ ಹೇಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಮಾತಿಗೆ ಬೆಲೆ ಕೊಡುತ್ತೇವೆ. ಈಗ ಇಲ್ಲಿ ಕಾನೂನು ಮಂತ್ರಿಗಳು ನಿದ್ದಾರೆ. ಅವರು ಈ ಬಗ್ಗೆ ಏನಾದರೂ ಹೇಳುತ್ತಾರೆಯೋ ?

ಶ್ರೀ ಡಿ. ಕೆ. ನಾಯ್ಕರ್.—ಎಲ್ಲವನ್ನೂ ಬರೆದುಕಳುಹಿಸಿದ್ದೇವೆ ಎಂದು ನಾನು ನಿನ್ನೆಯೇ ಹೇಳಿದ್ದೇನೆ.

CALLING ATTENTION TO MATTERS OF URGENT PUBLIC IMPORTANCE :

(i) *re: landslide at Benegal site in Pejamanagar Village, Udipi Taluk.*

SRI JAYAPRAKASH SHETTY (Brahmavar).—I call the attention of the Minister for Revenue to the landslide that took place on 29-3-1976 at Benegal site in Pejamanagar village, Udipi Taluk.

SRI N. HUCHMASTHI GOWDA (Minister for Revenue) —I wish to make the following statement: It is reported that a landslide calamity took place on 29th March 1976 at Benegal Bridge site in Pejamanagar Village of Udipi Taluk. About 20 workers most of them young, were engaged in excavating the earth below a small hillock, for the Brahmavar-Kokkarne road. They were scooping out the earth from the hillock and loading it on the lorry. While they were so employed, a mound of earth suddenly came hurtling down from the top along with a large number of boulders. When a large quantity of earth thus came down unexpectedly, three persons were buried under the debris and were killed; and eight others were injured. The injured were admitted to the Government Hospital, Udipi out of whom two persons died in the Hospital.

The Deputy Commissioner came to know of the unfortunate incident and rushed to the Hospital and saw the injured. Thereafter he rushed to the scene of the incident at Pejamangoor Village. The post-mortem of the three dead was going on there Shri Vittal Shetty, the Contractor, who has undertaken the construction of of Benegal Bridge and who had employed these labourers, the victims of the accident, was asked to pay a sum of Rs. 1,000/- to the dependents of each of the deceased and a sum of Rs. 500/- to each of the injured persons except Koraga Hedge, whose injuries were very superficial. He immediately gave a sum of Rs. 1,000/- on 29th, which amount was disbursed among the survivors of the deceased at the rate of Rs. 200/- each. He has further given a sum of Rs. 6,500/- to the Tahsildar, Udipi. This amount is being distributed at the rate of Rs. 800/- among the survivors of the deceased and Rs. 500/- among the injured persons.

Further Government have sanctioned a sum of Rs. 500/- to each of the five dead and Rs. 250/- to each of the five injured. These orders have been comunicated to the Deputy Commissioner, South Kanara District.

ಶ್ರೀ ಜಯಪ್ರಕಾಶ್ ಶೆಟ್ಟಿ.—ಸರ್ಕಾರದವರು ಈ ದುರಂತವನ್ನು ನ್ಯಾಷನಲ್ ಕ್ಯಲಾಮಿಟಿ ಎಂದು ಪರಿಗಣಿಸಿದ್ದಾರೆಯೇ ಆಥವಾ ಆಕ್ಸಿಡೆಂಟ್ ಎಂದು ಪರಿಗಣಿಸಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಕ್ಸಿಡೆಂಟ್ ಎಂದು ಹೇಳಬಹುದು.

ಶ್ರೀ ಜಯಪ್ರಕಾಶ್ ಶೆಟ್ಟಿ.—ನ್ಯಾಷನಲ್ ಕ್ಯಲಾಮಿಟಿ ಎಂದು ಪರಿಗಣಿಸದಿರುವುದಕ್ಕೆ ಕಾರಣವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಯಾವ ಕಾರಣದಿಂದ ಭೂಮಿ ಜಾರಿಬಂತೋ ಗೊತ್ತಿಲ್ಲ. ಆದುದರಿಂದ ಇದು ಆಕಸ್ಮಿಕವಾಗಿ ಆದಂತಹ ದುರಂತ ಎಂದು ಹೇಳುತ್ತೇನೆ.

ಶ್ರೀ ಜಯಪ್ರಕಾಶ್ ಶೆಟ್ಟಿ.—ಸರ್ಕಾರದವರು ಆ ದುರಂತದಲ್ಲಿ ಸತ್ತವರಿಗೆ ಮತ್ತು ಗಾಯಗೊಂಡವರಿಗೆ ತಾತ್ಕಾಲಿಕ ಪರಿಹಾರ ಕೊಟ್ಟಿದ್ದೀರಿ. ಅವರಿಗೆ ಖಾಯಂ ಪರಿಹಾರ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಇರತಕ್ಕ ನಿಯಮಗಳ ಪ್ರಕಾರ ಕಂಟ್ರಾಕ್ಟರುಗಳ ಮುಂಖಾಂತರ ಒಂದು ಸಾವಿರ ರೂಪಾಯಿಗಳನ್ನು ಕೊಡಿಸಿದ್ದೇವೆ. ಅದರ ಜೊತೆಗೆ ಸರ್ಕಾರವೂ ಕೂಡ ಸತ್ತವರ ಕುಟುಂಬಕ್ಕೆ ೫೦೦ ರೂಪಾಯಿಗಳನ್ನು ಮತ್ತು ಗಾಯಗೊಂಡವರಿಗೆ ೨೫೦ ರೂಪಾಯಿಗಳನ್ನು ಕೊಟ್ಟಿದೆ.

SRI JAYAPRAKASH SETTY.—It is a interem relife. What is the permanent relief given to the relatives of the deceased persons and those persons who are in the Hospital ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಿರತಕ್ಕ ಕ್ರಮದ ಪ್ರಕಾರ ನಾವು ಇದಕ್ಕಿಂಥ ಹೆಚ್ಚಿಗೆ ಕೊಡಲಾಗುವುದಿಲ್ಲ.